ಸಂ	ಹೆಸರು	ಯೋಜನೆ	ಯೋಜನೇತರ	ಒಟ್ಟು
1	ಬಿಜಾಪುರ	1195 89	359 72	1555 61
2	ಧಾರವಾಡ	2097 26	300 07	2397 33
3	ಬಾಗಲಕೋಟೆ	849 11	215 86	1064 97
4	ಗುಲ್ಬರ್ಗಾ	1754 52	256 90	1991 42
5	ಬಳ್ಳಾರಿ	972 60	240 93	1113 53
6	ಬೀದರ್	1046 29	123 88	1170 17
7	ರಾಯಚೂರು	972 54	243 02	1215 56
8	ಕೊಪ್ಪಳ	1157 50	112 10	2269 60
	ಒಟ್ಟು	10045 71	1732 48	11778 19

ಕ್ರ ಸಂ	ಜಿಲ್ಲೆಗಳ ಹೆಸರು	ಸರ್ವ ಶಿಕ್ಷಣ ಅಭಿಯಾನ		
		ಯೋಜನೆ	ಯೋಜನೇತರ	ಒಟ್ಟು
1	ಬಿಜಾಪುರ	6348 85	–	6348 85
2	ಧಾರವಾಡ	3469 76	–	3469 76
3	ಬಾಗಲಕೋಟೆ	2768 03	–	2768 03
4	ಗುಲ್ಬರ್ಗಾ	8463 52	–	8463 52
5	ಬಳ್ಳಾರಿ	6103 11	–	6103 11
6	ಬೀದರ್	5412 67	–	5412 67
7	ರಾಯಚೂರು	2857 81	–	2857 81
8	ಕೊಪ್ಪಳ	2521 55	–	2521 55
	ಒಟ್ಟು	37945 3	–	37945 30

39 (12) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ವಿರಾಜಪೇಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಏತ ನೀರಾವರಿ ಕಾಮಗಾರಿಗಳಾದ ಕೊಂಗಣ ಹಾಗೂ ಮಾಲ್ದಾರೆ ಏತ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದಾಗಿ ಸರ್ಕಾರ ಭರವಸೆ ನೀಡಿದ್ದರೂ ಕಾರ್ಯಗತವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು ,

ಇ) ಪ್ರಸಕ್ತ ವರ್ಷದಲ್ಲಿ ಈ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಬಂದಿದೆ

ಆ) ಕೊಂಗಣ ಏತ ನೀರಾವರಿ ಯೋಜನೆ ಅನುಷ್ಟಾನದ ಬಗ್ಗೆ ಪರಿಶೀಲಿಸಲಾಗಿದ್ದು, ಈ ಯೋಜನೆ ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಫಲಪ್ರದವಾಗುವುದಿಲ್ಲವೆಂದು ತಿಳಿದು ಬಂದಿದೆ ಮೇಲ್ದಾರೆ ಏತ ನೀರಾವರಿ ಯೋಜನೆಗೆ ಸುಮಾರು 20 00 ಕೋಟಿ ರೂ ಗಳ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ ಈ ಯೋಜನೆ ಕಾವೇರಿ ಜಲಾನಯನದ ವ್ಯಾಪ್ತಿಯಲ್ಲಿ ಬರುವುದರಿಂದ, ಕಾವೇರಿ ನ್ಯಾಯಾಧೀಕರಣದ ಅಂತಿಮ ಆದೇಶದ ನಂತರವೇ ಈ ಯೋಜನೆಯನ್ನು ಅನುಷ್ಟಾನಗೊಳಿಸುವ ಬಗ್ಗೆ ಪರಿಶೀಲಿಸಬಹುದಾಗಿರುತ್ತದೆ

ಇ) ಯಾವುದೇ ಹಣ ಬಿಡುಗಡೆ ಮಾಡಿಲ್ಲ

40 (110) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಉತ್ತರ ಕನ್ನಡ ಜಿಲ್ಲೆಯ ಜೋಯಡಾ ತಾಲ್ಲೂಕಿನಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರವು ಏನು ಕ್ರಮ ಕೈಗೊಳ್ಳುತ್ತಿದೆ ?

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೌದು

ಆ) ಸರ್ಕಾರಿ ಪ್ರಾಥಮಿಕ ಶಾಲೆ

2005–06ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯು ಮುಗಿದಿದ್ದು ನವೆಂಬರ್ 2006 ರಲ್ಲಿ ಉತ್ತರ ಕನ್ನಡ ಜಿಲ್ಲೆಗೆ 203 ಹುದ್ದೆಗಳನ್ನು ಹಂಚಲಾಗಿದೆ ಈ ಪೈಕಿ ಜೈಯಿಡಾ ತಾಲ್ಲೂಕಿಗೆ 29 ಅಭ್ಯರ್ಥಿಗಳನ್ನು ನೇಮಕಾತಿ ಮಾಡಲಾಗಿದೆ